**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 100/2018.**

**ಸಿ.ಡಬ್ಲ್ಯೂಃ–11          ಪಿ.ಡಬ್ಲ್ಯೂಃ–7**

**ದಿಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಲಗಮಣ್ಣಾ @ ಅಜೀತ ತಂದೆ ಬಾಗಪ್ಪಾ @ ಬಾಗೋಜಿ ಹೆಗ್ಗನ್ನವರ. |
| ವಯಸ್ಸು | : | 23 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಜೋಡಕುರಳಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ನನ್ನ ಮಾಮ.

2) ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಗೊತ್ತು.

3) ಈಗ್ಗೆ 11 ವರ್ಷಗಳ ಹಿಂದೆ ನನ್ನ ಮಾವನ ಮನೆ ಮುಂದೆ ಹೊಲದಲ್ಲಿ ಸಂಜೆ 05.30 ಗಂಟೆ ಸುಮಾರಿಗೆ ಜೋಡಕುರಳಿಯಲ್ಲಿ ಟ್ರ್ಯಾಕ್ಟರನಿಂದ ಗಳೆ ಹೊಡೆಯುತ್ತಿದ್ದಾಗ ಆರೋಪಿತರೆಲ್ಲರೂ ಬಂದು ಏಕಾಏಕಿ ಬಡಿಗೆ ಮತ್ತು ಕಲ್ಲು ತೆಗೆದುಕೊಂಡು ಬಂದು ಹೊಡೆಯಲು ಆರಂಭಿಸಿದರು. ರಂಡಿ

ಮಕ್ಕಳಾ, ಭೋಸಡಿ ಮಕ್ಕಳಾ ಅಂತಾ ಬೈದರು. ಮುತ್ತಪ್ಪಾ ಹರಕೆ ನನಗೆ ಕೈಯಿಂದ ಬಡಿದ. ಉಳಿದವರೆಲ್ಲರೂ ನನ್ನ ಮಾವಂದಿರಿಗೆ ಬಡಿಗೆ ಮತ್ತು ಕಲ್ಲುಗಳಿಂದ ಬಡಿದರು. ನಂತರ ಅಂಬ್ಯುಲೆನ್ಸದಲ್ಲಿ ಸರ್ಕಾರಿ ದವಾಖಾನೆಗೆ ಹಾಗೂ ಚರಾಟೆ ಆಸ್ಪತ್ರೆಗೆ ಹೋದೆವು. ನನ್ನ ಮಾವ ಕಂಪ್ಲೆಂಟ್ ಕೊಟ್ಟ.

4) ಆರೋಪಿತರು ಬಡಿದ ಬಡಿಗೆಗಳನ್ನು ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಮು.ಮಾ.1 ರಿಂದ 19 ತೋರಿಸಲಾಗಿ ಅವುಗಳಿಂದಲೇ ಆರೋಪಿತರು ಬಡಿದಿದ್ದಾಗಿ ಗುರುತಿಸುತ್ತಾರೆ.

5) ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಮ್ಮ ಮಾವ ಹಾಗೂ ಆರೋಪಿತರಿಗೆ ಬಹಳ ವರ್ಷಗಳಿಂದ ಜಗಳ ಇತ್ತು ಎಂದರೆ ಸರಿ.

2) ದಿನಾಂಕಃ 20.04.2014 ರಂದು ಸಂಜೆ 05.00 ಗಂಟೆ ಸುಮಾರಿಗೆ ನಮ್ಮ ಪಾಲಿಗೆ ಬಂದ ಜಮೀನದಲ್ಲಿ ನಾವು ಗಳೆ ಹೊಡೆಯುತ್ತಿದ್ದಾಗ 3ನೇ

ಆರೋಪಿ ಬಂದು ಗಳೆ ಹೊಡೆಯಬೇಡಿರಿ ಅಂತಾ ತಕರಾರು ಮಾಡಿದ ಎಂದರೆ ಸರಿ. ಆ ಕಾಲಕ್ಕೆ ಚಾ.ಸಾ.12 ಮತ್ತು 13 ರವರನ್ನು ಕರೆಸಿ ಬುದ್ದಿವಾದ ಹೇಳಿಸಿದೇವು ಎಂದರೆ ಸರಿ. ಆ ಹಿರಿಯರ ಮಾತು ಕೇಳದೇ ಆರೋಪಿತರು ಕೈಯಲ್ಲಿ ಬಡಿಗೆಗಳನ್ನು ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ನಮಗೆ ಹೇಳದೇ ಕೇಳದೇ ಗಳೆ ಹೊಡೆಯುತ್ತಿದ್ದೀರಿ ಸೂಳೆಮಕ್ಕಳಾ , ಬೋಸಡಿಮಕ್ಕಳಾ ಅಂತಾ ಅವಾಚ್ಯವಾಗಿ ನಮಗೆ ಬೈದರು ಎಂದರೆ ಸರಿ. ನನಗೆ ಲಗಮಾ , ಯಲ್ಲಪ್ಪಾ ಹಾಗೂ ಕಮಲವ್ವಾ ಬಡಿಗೆಯಿಂದ ನನ್ನ ಮೈಕೈಗೆ ಬಡಿದರು ಎಂದರೆ ಸರಿ. ನಮ್ಮನ್ನು ಕೊಲ್ಲುವ ಸಲುವಾಗಿ ನನಗೀಗ ತೋರಿಸಿದ ಮು.ಮಾ.1 ರಿಂದ 15 ಬಡಿಗೆಗಳಿಂದ ನಮಗೆಲ್ಲಾ ಹೊಡೆದರು ಹಾಗೂ ನನಗೀಗ ತೋರಿಸಿದ ಮು.ಮಾ.16 ರಿಂದ 19 ಕಲ್ಲುಗಳಿಂದ ನಾವು ಕೆಳಗೆ ಬಿದ್ದ ಮೇಲೆ ನಮ್ಮ ಮೇಲೆ ಎಸೆದರು ಎಂದರೆ ಸರಿ. ಆಗ ನಮಗಾದ ಗಾಯಗಳಿಗೆ ನಾವು ಚಿಕ್ಕೋಡಿ ಆಸ್ಪತ್ರೆಗೆ ಬಂದು ತೋರಿಸಿಕೊಂಡು ನಂತರ ಚರಾಟೆ ಆಸ್ಪತ್ರೆಯಲ್ಲಿ ಉಪಚಾರಗೊಂಡೇವು ಎಂದರೆ ಸರಿ. ಸದರಿ ವಿಚಾರವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ–** 2, 4, 7, 9, 11 **ರಿಂದ** 14 **ಮತ್ತು** 16 **ನೇ ಆರೋಪಿತರ ಪರಃಶ್ರೀ ಎಸ.ಎಸ.ಡಿ.ವಕೀಲರಿಂದ** :

1) ನಾನು ಶಾಲೆ ಕಲಿತಿಲ್ಲ. ನಮ್ಮೂರ ನಾಗರಾಳ ಎಂದರೆ ಸರಿ. ನಾನು ಸಿದ್ದಪ್ಪನ ಅಕ್ಕನ ಮಗ.

2) ನನ್ನ ಮಾವಂದಿರು ಆರೋಪಿತರ ಖೊಟ್ಟಿ ಸಹಿ ಮಾಡಿ ಬ್ಯಾಂಕಿನಿಂದ ಸಾಲ ಪಡೆದಿದ್ದರು ಹಾಗೂ ಜೈಲಗೆ ಹೋಗಿದ್ದರು ಎಂದರೆ ಸರಿ. ಆ ರೀತಿ ಜೈಲಿನಲ್ಲಿ ಬಂದು ಬಿದ್ದ ಮೇಲೆ ಚಾ.ಸಾ.8 ಮಹಾದೇವಿ ಕಡೆಯಿಂದ ಜಾತಿನಿಂದನೆ ಪ್ರಕರಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ಆರೋಪಿತರನ್ನು ಖುಲಾಸೆ ಮಾಡಲಾಗಿದೆ ಎಂದರೆ ಸರಿ.

3) 10 ಎಕರೆ ಜಮೀನದಲ್ಲಿ ನನ್ನ ಅಜ್ಜ ಅರ್ಧ ಹಾಗೂ ಆರೋಪಿತರು ಅರ್ಧ ಅಂತಾ ಭಾಗ ಮಾಡಿಕೊಂಡು ಕೋರ್ಟಿನಲ್ಲಿ ಅಪಸಾತಿ ಮಾಡಿಕೊಂಡು ಪ್ರತ್ಯೇಕ ವಹಿವಾಟು ಮಾಡಿದ್ದಾರೆ ಎಂದರೆ ಸರಿಯಲ್ಲ.

4) ಆರೋಪಿತರ ಹೊಲದ ಪಕ್ಕದಲ್ಲಿ ಮಹಾದೇವಿ ಬಾವಿ ಪಂಚಾಯತಿಯಿಂದ ಮಂಜೂರು ಮಾಡಿಕೊಂಡು ದುಟಾಯಿತನದಿಂದ ಹಾಕಿಸಹತ್ತಿದ್ದಳು ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಛಾಯಾಚಿತ್ರ ತೋರಿಸಲಾಗಿ ಆ ರೀತಿ ಬಾವಿಯನ್ನು ಹೊಸದಾಗಿ ಕೊರೆಸಲಾಗುತ್ತಿತ್ತು ಎಂದು ಸೂಚಿಸಿದಾಗ ಸಾಕ್ಷಿ ಒಪ್ಪಿಕೊಂಡಿದ್ದು ಅದನ್ನು ನಿ.ಡಿ. 5 ಅಂತಾ ಗುರುತಿಸಲಾಯಿತು. ಈಗ ನಮ್ಮ ಮಾವಂದಿರು ಅವರ ಹೊಲ ಮಾರಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಡ ಇಟ್ಟಿದ್ದಾರೆ ಎಂದು ನುಡಿಯುತ್ತಾರೆ.

5) ಜಗಳ ಮನೆಯಿಂದ ಸುಮಾರು 60 ಅಡಿ ಅಂತರದಲ್ಲಿ ಆಗಿದೆ. ಜಗಳ

05.30 ರಿಂದ 06.00 ಗಂಟೆಯವರೆಗೆ ಆಯಿತು. ಬೇರೆ ಜನ ನಿಂತು ನೋಡುತ್ತಿದ್ದರು.

6) ಯಾವುದೇ ಆರೋಪಿತರು ನನಗೆ ಬಡಿದಿಲ್ಲ ಎಂದರೆ ಸರಿಯಲ್ಲ.

7) ಜಾಗಾಕ್ಕೆ ಪೋಲಿಸರು ಬಂದಿದ್ದರು. ಮನೆಯಿಂದ 60 ಅಡಿ ನಂತರದ ಜಾಗವನ್ನು ನಾನು ತೋರಿಸಿಲ್ಲ. ನಾವೆಲ್ಲಾ ಆಗ ಆಸ್ಪತ್ರೆಯಲ್ಲಿದ್ದೆವು. ಅಲ್ಲಿಗೆ ಪೋಲಿಸರು ಬಂದಿದ್ದರು. ವೈಧ್ಯರಿಗೆ ಆರೋಪಿತರು ಕೈಯಿಂದ ಬಡಿದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಯಾವ ತರಹದ ಬಡಿಗೆಗಳಿದ್ದವು ಅಂತಾ ಹೇಳಿಲ್ಲ ಎಂದರೆ ಸರಿ. ಈ ತರಹದ ಬಡಿಗೆಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿರುತ್ತವೆ ಎಂದರೆ ಸರಿ. ಬಡಿಗೆಗಳಿಗೆ ಮತ್ತು ಕಲ್ಲುಗಳಿಗೆ ರಕ್ತ ಹತ್ತಿದ್ದನ್ನು ನಾನು ನೋಡಿದ್ದೇನೆ. ಆರೋಪಿತರು ಈ ಬಡಿಗೆಗಳಿಂದ ಬಡಿದಿಲ್ಲ ಇದಕ್ಕಿಂತ ಗಾತ್ರದಲ್ಲಿ ಮಟ್ಟೆ ಬಡಿಗೆಗಳು ಇದ್ದವು ಅವುಗಳಿಂದ ಬಡಿದಿದ್ದಾರೆ. ಪೋಲಿಸರು ನನ್ನ ಹೇಳಿ ಕೇಳಿ ಎನು ಬರೆದುಕೊಂಡಿಲ್ಲ ಎಂದರೆ ಸರಿ.

8) ನಾನು ಮೇಲೆ ಹೇಳಿದಂತೆ ಆರೋಪಿತರು ನಮ್ಮ ಮಾವಂದಿರ ಹೊಲಕ್ಕೆ ಬಂದಿಲ್ಲ, ನಮ್ಮೊಂದಿಗೆ ಯಾವುದೇ ಜಗಳ ತೆಗೆದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಮಾಡುವ ಉದ್ದೇಶದಿಂದ ಮು.ಮಾ.1 ರಿಂದ 19 ನೇದ್ದವುಗಳನ್ನು ಬಳಸಿ ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಹಾಗೂ ಕೊಲೆ ಮಾಡುವ ಪ್ರಯತ್ನ ಮಾಡಿಲ್ಲ, ನಮಗೆ ಹೊಡೆಬಡೆ ಮಾಡಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮಾವಂದಿರಿಗೆ ಯಾವುದೇ ಹೊಲ

ಇಲ್ಲದೇ ಇದ್ದ ಕಾರಣ ಹೇಗಾದರೂ ಮಾಡಿ ಹೊಸದಾಗಿ ಹೊಲ ಕಿತ್ತುಕೊಳ್ಳಲು ಸುಳ್ಳು ಕೇಸು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

8ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.